**O.S. 369-19 DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 09.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ S S S ವಕೀಲರಿಂದಃ**

4. ಸೋಮಪ್ಪ ಇಟಗಿ ರವರು 2019 ರಲ್ಲಿ ಮರಣ ಹೊಂದಿದ್ದಾರೆ. ಸೋಮಪ್ಪ ಇಟಗಿ ರವರು ಮರಣ ಹೊಂದಿದಾಗ ಅವರ ವಯಸ್ಸು 78 ವರ್ಷ. 82 ವರ್ಷ ಆಗಿರಬಹುದು ಅಂದರೆ ಇರಬಹುದು. ಈಶ್ವರನಗರದಲ್ಲಿ ಸೋಮಪ್ಪ ಇಟಗಿ ರವರು ಹಿರಿಯ ವ್ಯಕ್ತಿ ಅಂದರೆ ಸರಿ. ಸೋಮಪ್ಪ ಇಟಗಿ ರವರು ಸದರಿ ಭಾಗದಲ್ಲಿ ಅವರು ಹಿರಿತನ ಮಾಡಿ ಸಮಸ್ಯೆ ಬಗೆಹರಿಸುತ್ತಿದ್ದರು ಅಂದರೆ ಸರಿ. ಮನೆತನದಲ್ಲಿ ತೂಕದ ವ್ಯಕ್ತಿ ಅಂದರೆ ಸರಿ. ಅವರ ಜೀವಿತಾವಧಿಯಲ್ಲಿ ಹೊಲ-ಮನೆ ನೋಡಿಕೊಳ್ಳುತ್ತಿದ್ದರು ಅಂದರೆ ಸರಿ. ಸರಕಾರಿ ಕಚೇರಿಗಳಿಗೆ ಓಡಾಡಿ ಕೆಲಸ ಮಾಡಿಸುತ್ತಿದ್ದರು ಅಂದರೆ ಸರಿ. ನ್ಯಾಯಾಲಯದಲ್ಲಿ ಅವರಿಗೆ ತಿಳವಳಿಕೆ ಇತ್ತು ಅಂದರೆ ಸರಿ. ಕೋರ್ಟ - ಕಚೇರಿಗಳಿಗೆ ತಿರುಗಾಡುವುದು - ಹೆಚ್ಚಿನ ಜ್ಞಾನವಿತ್ತು ಅಂದರೆ ಸರಿ. ಮಕ್ಕಳ ಜೊತೆಗೆ ಅನ್ಯೋನ್ಯವಾಗಿದ್ದರು ಅಂದರೆ ಸರಿ. ಸಿದ್ದಾರ್ಥ ರವರು ಸೋಮಪ್ಪ ಇಟಗಿ ರವರ ಜೊತೆಗೆ ಇದ್ದರು. ವಾದಿ ನಂಃ 1 ಹಾಗೂ 2 ಒಬ್ಬರು ಧಾರವಾಡ ಇನ್ನೊಬ್ಬರು ಈಶ್ವರನಗರದಲ್ಲಿದ್ದಾರೆ ಅಂದರೆ ಸರಿ. ವಾದಿಗಳು ಮನೆಗೆ ಬಂದು-ಹೋಗಿ ಮಾಡುತ್ತಿದ್ದರು ಅಂದರೆ ಸರಿ. ತಾಯಿ ಇದ್ದಾಗ ಬರುವುದು-ಹೋಗುವುದು ಮಾಡುತ್ತಿದ್ದರು ಅಂದರೆ ಸರಿ. ಸಭೆ-ಸಮಾರಂಭಗಳನ್ನು ಎಲ್ಲರೂ ಕೂಡಿ ಮಾಡುತ್ತಿದ್ದರು ಅಂದರೆ ಸರಿ. ಅಸಲು ದಾವೆ ನಂಃ 73/11 ನ್ನು ವಾದಿ -1 ಹಾಗೂ 2 ರವರು ದಾಖಲ್ ಮಾಡಿದ್ದರು. ಸದರಿ ದಾವೆ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ. ಅದರಲ್ಲಿ ಯಾರು ಪಕ್ಷಗಾರರು ಇದ್ದಾರೆಂದು ಗೊತ್ತಿಲ್ಲ. ವಾದ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿಲ್ಲ. ಅಸಲು ದಾವೆ ನಂಃ 73/11 ನ್ನು ಯಾವ ಪರಿಹಾರ ಬೇಡಿ ಸಲ್ಲಿಸಿದ್ದರೆಂದು ಗೊತ್ತಿಲ್ಲ. ಸದರಿ ದಾವೆ ದಾವೆ ವಜಾಗೊಂಡಿದೆ. ನನ್ನ ಪ್ರತಿವಾದ ಪತ್ರದಲ್ಲಿಅಸಲು ದಾವೆ ನಂಃ 73/11 ರಲ್ಲಿ ಸೋಮಪ್ಪ ರವರ ಸ್ವಯಾರ್ಜಿತ ಅಂತಾ ತೀರ್ಪು ಆಗಿದೆ ಎಂದು ಹೇಳಿದ್ದೇನೆ ಅಂದರೆ ಸರಿ. ಸದರಿ ಭಾಗವನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಪಿ.16 ಎಂದು ಗುರುತಿಸಲಾಯಿತು. ಅಸಲು ದಾವೆ ನಂಃ 73/11 ನ್ನು ಒಂದೆ ಜಮೀನಿಗೆ ಸಂಬಂಧಪಟ್ಟಂತೆ ಸಲ್ಲಿಸಿದ್ದಾರೆ ಅಂದರೆ ಸರಿ. ಸದರಿ ದಾವೆಯಲ್ಲಿ ಸಿದ್ದಾರ್ಥ ಹಾಗೂ ಸೋಮಪ್ಪ ಏಕತರ್ಫಿ ಇದ್ದಾರೆ ಅಂದರೆ ಸರಿ. ಸಿದ್ದಾರ್ಥ ಹಾಗೂ ಸೋಮಪ್ಪ ಹಾಗೂ ಉಳಿದವರು ಯಾರು ಪ್ರತಿವಾದ ಪತ್ರ ಸಲ್ಲಿಸಿಲ್ಲ ಅಂದರೆ ಸರಿ.

**O.S. 369-19** **DW-1**

ಅಸಲು ದಾವೆ ನಂಃ 73/11 ರ ವಾದ ಪತ್ರದಲ್ಲಿ ವಾದಿಗಳು ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಬರೆದುಕೊಂಡಿದ್ದಾರೆ ಅಂದರೆ ಸರಿ. ಸ ನಂಃ 36/2 ಸಿ, 6 ಎಕರೆ 10 ಗುಂಟೆ ಜಮೀನನ್ನು ಮಾರಾಟ ಮಾಡಿ, ಸ ನಂಃ 213/2, 5 ಎಕರೆ 13 ಗುಂಟೆ ಜಮೀನನ್ನು ಖರೀದಿ ಹಿಡಿದಿದ್ದಾರೆ ಅಂದರೆ ಸರಿ. ಆ ಕಾರಣದಿಂದ ಅವರಿಗೂ ದಾವಾ ಆಸ್ತಿಯಲ್ಲಿ ಹಕ್ಕು ಇದೆ ಎಂದು ದಾವೆ ಮಾಡಿದ್ದರು ಅಂದರೆ ಸರಿ. ಸ ನಂಃ 213/2, ಸೋಮರಪ್ಪ ರವರು 1999 ರಲ್ಲಿ ಖರೀದಿ ಮಾಡಿದ್ದರು ಅಂದರೆ ಸರಿ. ಮುಂದೆ ಸೋಮಪ್ಪ ರವರು ಮಾರಾಟ ಮಾಡಿದ ಜಮೀನಿನ ಮಾರುಕಟ್ಟೆ ಬೆಲೆ ಹೆಚ್ಚಾಯಿತು ಅಂದರೆ ಸರಿ. ನನಗೆ ಲಾಭ ಕಡಿಮೆಯಾಯಿತು ಅಂತಾ ಸೋಮಪ್ಪ ಹೆಣ್ಣು ಮಕ್ಕಳು ವಾದಿಗಳ ಕಡೆಯಿಂದ ದಾವೆ ಸಲ್ಲಿಸಿದ್ದಾರೆ ಅಂದರೆ ಗೊತ್ತಿಲ್ಲ.

**ಮುಂದಿನ ಪಾಟಿ ಸವಾಲಿಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.